ಸುಮ್ಮನೆ ಕುಳಿತಿದ್ದಳು. ಅವಳು ತನ್ನ ಕಡೆಗೆ ಗಮನ ಕೊಡುತ್ತಿಲ್ಲ ಎಂದು ಟೆಲಿಪತಿಯ ಮೂಲಕ ಗೊತ್ತಾದಂತೆ ಬೊಮ್ಮಿ ಥೈ ಥೈ ಥೈ ಎಂದು ಕುಣಿಯಲಾರಂಭಿಸಿದಳು. ಎಲಾ! ಇದೆಂಥ ಕತೆ ಇವಳದು? ಹೊಸ ಹೊಸ ಆಟ ಆಡುತ್ತಿದ್ದಾಳಲ್ಲಾ ಎಂದು ಯಮುನಕ್ಕ ಆತಂಕದಿಂದ ಅಂಗಳದಲ್ಲಿ ಕುಣಿಯುತ್ತಿದ್ದ ಬೊಮ್ಮಿ ಹೆಂಗಸನ್ನು ನೋಡತೊಡಗಿದಳು. ಬೊಮ್ಮಿ ಕೋಳಿ, ಮೀನು ತಿಂದು ಗಟ್ಟಿಮುಟ್ಟಾಗಿದ್ದ ಹೆಂಗಸು. ಯಾವ ಮುಲಾಜೂ ಇಲ್ಲದೆ ಊರಲ್ಲಿ ಎಲ್ಲಿ ಊಟವಿದ್ದರೂ ಹೋಗಿ ದೊಡ್ಡ ಬಾಯಿಯಲ್ಲಿ ಗದ್ದಲವೆಬ್ಬಿಸಿ ತಾನು ಹಕ್ಕಿನಿಂದಲೇ ಬಂದವಳಂತೆ ಓಡಾಡುತ್ತಾ ಬೇಕಾದುದನ್ನೆಲ್ಲ ಜರ್ಬಿನಿಂದಲೇ ಕೇಳಿ ಹಾಕಿಸಿಕೊಂಡು ತಿಂದು ಬರುವವಳು. ಅದರಲ್ಲೂ ಮಾಂಸದ ಊಟವಲ್ಲದಿದ್ದರೆ ಊಟ ಮಾಡಿದ ನಂತರ, 'ಇಸ್ಸಪ್ಪ ಇದೆಂಥದು ನಿಮ್ಮ ಪುಳಿಕೊದ್ದೆಲು ಊಟ. ನಮ್ಮಂಥವರಿಗೆ ಇದೆಲ್ಲ ಅಲ್ಲ' ಎಂದು ಆಶೀರ್ವಾದ ಮಾಡಿಯೇ ಹೊರಡುವವಳು.

**ಯಮುನಕ್ಕ ಒಳಗಿನಿಂದ ಒಂದು ಗಿಂಡಿಯಲ್ಲಿ ನೀರು ತಂದು ಬೊಮ್ಮಿಯ ಮುಖ, ಕುತ್ತಿಗೆಗಳಿಗೆ ಚಿಮುಕಿಸಿದಳು. ಪದ್ಮ ತನ್ನ ಸೆರಗಿನಿಂದ ಗಾಳಿ ಹಾಕಿದಳು. ಬೊಮ್ಮಿ ಕಣ್ಣು ತೆರೆದು ಇವರನ್ನು ನೋಡುತ್ತಿದ್ದರೂ ಮಾತು ಹೊರಡುತ್ತಿರಲಿಲ್ಲ. ಬೊಮ್ಮಿಗೆ ಲಕ್ವ ಹೊಡೆದಿರಬೇಕೆಂದು ಪದ್ಮಳಿಗೆ ಯೋಚನೆ ಬಂತು.**

★★★

ಇದ್ದಕ್ಕಿದ್ದಂತೆ ಬೊಮ್ಮಿಯ ಸ್ವರ ನಿಂತುಹೋಗಿ ಅವಳು ಧೊಪ್ಪನೆ ಬಿದ್ದ ಸದ್ದು ಯಮುನಕ್ಕನ ಯೋಚನಾ ಲಹರಿಯನ್ನು ಕಡಿಯಿತು. ಸ್ವಲ್ಪ ಹೊತ್ತು ಯಮುನಕ್ಕ ಸುಮ್ಮನೆ ಕುಳಿತು ಬೊಮ್ಮಿಯ ಸ್ವರವೇನಾದರೂ ಕೇಳುತ್ತದೆಯೇ ಎಂದು ಆಲಿಸಿದಳು. ಏನೂ ಸ್ವರವಿಲ್ಲ. ಕುಳಿತಲ್ಲಿಂದಲೇ ಬಾಗಿ ನೋಡಿದಳು.

ಬೊಮ್ಮಿ ಅಂಗಳದಲ್ಲಿ ಬಿದ್ದಿದ್ದಳು. 'ಅಂತೂ ದೇವರು ಅವಳ ಬಾಯಿಯನ್ನು ಕೊನೆಗೂ ಮುಚ್ಚಿಸಿದ' ಎಂದು ಯಮುನಕ್ಕ ಒಮ್ಮೆ ಖುಷಿಪಟ್ಟಳು. ಸ್ವಲ್ಪ ಹೊತ್ತಿನಲ್ಲಿ ಅವಳಿಗೆ ಆತಂಕ ಶುರುವಾಯಿತು. ಬೊಮ್ಮಿ ಇಲ್ಲೇ ಅಂಗಳದಲ್ಲಿ ಸತ್ತುಹೋಗಿದ್ದರೆ? ಆಮೇಲೆ ಪೊಲೀಸ್ – ಗಿಲೀಸ್ ಎಲ್ಲ ಬರಬಹುದು. ತಾನೇ ಏನೋ ಮಾಡಿದೆ ಎಂದು ಅವರಿಗೆಲ್ಲ ಸಂಶಯ ಬರಬಹುದು.

ಯಮುನಕ್ಕ ಮೆಲ್ಲನೆ ಅಂಗಳಕ್ಕಿಳಿದು ಬೊಮ್ಮಿಯ ಬಳಿ ಸಾರಿದಳು. ಬೊಮ್ಮಿಯ ಕಣ್ಣು ಅಗಲವಾಗಿ ತೆರೆದು ಮೇಲೆ ನೋಡುತ್ತಿದ್ದಂತೆ ಇದ್ದವು; ಬಾಯಿ ವಕ್ರವಾಗಿ ಜೊಲ್ಲು ಸುರಿಯುತ್ತಿತ್ತು. ಬೊಮ್ಮಿಗೆ ಭೂತ ಪೆಟ್ಟು ಇಟ್ಟಿದೆ ಎಂದು ಯಮುನಕ್ಕನಿಗೆ ತಿಳಿಯಿತು. ತನ್ನ ಮನೆಯ ಪಂಜುರ್ಲಿಯೇ ಅವಳ ಬಾಯಿ ಮುಚ್ಚಿಸಿರಬೇಕು. 'ಸ್ವಾಮೀ ಪಂಜುರ್ಲಿ, ನನ್ನ ಮಾನ ಕಾಪಾಡಿದಿಯಪ್ಪ!' ಎಂದು ಮನಸ್ಸಿನಲ್ಲಿಯೇ ಕೈಮುಗಿದು, ಇನ್ನೇನು ಮಾಡುವುದು ಎಂದು ಪದ್ಮಳನ್ನು ಕರೆಯಲು ಹೋದಳು.